ಅದರಂತೆ ನನ್ನ ಅರ್ಜಿಯಲ್ಲಿ ಕೋರಿರುವಂತೆ ಅವಾರ್ಡ ಮಾಡಲು ವಿನಂತಿಸಿಕೊಳ್ಳುತ್ತೇನೆ.

<u>ಪಾಟೀ ಸವಾಲು ಶ್ರೀ ವಿ.ವಿ.ಸಿ ಎದುರುದಾರ ಪರ ವಕೀಲರಿಂದಃ</u>

1. ಮೃತ ಮೆಹಬೂಬ ಅಲಿ ನನ್ನ ತಂದೆ ಇದ್ದರು. ಅಪಘಾತ ದಿಃ 01-04-2023 ರಂದು ರಾತ್ರಿ 7ಃ30 ಗಂಟೆಗೆ ಮನ್ನಏ ಖೇಳಿಗೆ ಹೋಗುವ ಮುಖ್ಯ ರಸ್ತೆಯಲ್ಲಿ ಫತೇಪುರ ಕ್ರಾಸ ಹತ್ತಿರ ಆಗಿರುತ್ತದೆ. ಅಪಘಾತ ಆದಾಗ ನನ್ನ ತಂದೆಯ ಜೊತೆ ಬೇರೆ ಯಾರು ಇರಲಿಲ್ಲ ಅವರು ಒಬ್ಬರೆ ಹೋಗುತ್ತಿದ್ದರು. ಸ್ಥಳ ಮಹಜರಿನಲ್ಲಿ ಅಪಘಾತ ಸ್ಥಳದ ಸುತ್ತ ಮುತ್ತಲು ಮನೆ ಅಥವಾ ಅಂಗಡಿ ಇಲ್ಲ ಎಂದು ತೋರಿಸಿರುತ್ತಾರೆ ಎಂದರೆ ಸರಿ. ಸ್ಥಳ ರಸ್ತೆಯ ಮದ್ಯದಲ್ಲಿ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಗಾಡಿ ಬಂದು ಗುದ್ದಿದ್ದರಿಂದ ನನ್ನ ತಂದೆ ರಸ್ತೆಯ ಮದ್ಯದಲ್ಲಿ ಬಿದ್ದಿದ್ದರು ಎಂದು ಹೇಳುತ್ತಾರೆ. ಅಪಘಾತದ ಬಗ್ಗೆ ನನಗೆ ಶಿವಕುಮಾರ ಮತ್ತು ಸಂಗಮನಾಥ ಎಂಬುವವರು ಬಂದು ಹೇಳಿದ್ದಾರೆ. ಅವರು ಬಂದು ಹೇಳಿದ ನಂತರ ನಾನು ಅಪಘಾತದ ಸ್ಥಳಕ್ಕೆ ಹೋಗಿದ್ದೆ. ಶಿವಕುಮಾರ ಮತ್ತು ಸಂಗಮನಾಥ ಎಂಬುವವರು ಬಂದು ಹೇಳಿದ ಆಧಾರದ ಮೇಲೆ ನಾನು ದೂರು ಸಲ್ಲಿಸಿರುತ್ತೇನೆ ಎಂದರೆ ಸರಿ. ನಿ.ಪಿ-2 ರಲ್ಲಿ ನಾನು ಯಾವ ವಾಹನದಿಂದ ಅಫಘಾತ ಆಗಿದೆ ಎಂದು ಬರೆದಿಲ್ಲ, ವಾಹನದ ಸಂಖ್ಯೆ ಬರೆದಿಲ್ಲ ಎಂದರೆ ಸರಿ. ನಿ.ಪಿ-2 ರಲ್ಲಿ ಯಾವುದೊ ಒಂದು ವಾಹನ ಬಂದು ಡಿಕ್ಕಿ ಪಡಿಸಿರುತ್ತದೆ ಎಂದು ಬರೆದಿರುತ್ತೇನೆ ಎಂದರೆ ಸರಿ. ಶಿವಕುಮಾರ ಮತ್ತು ಸಂಗಮನಾಥರವರು ಅಪಘಾತ ಪಡಿಸಿದ ವಾಹನದ ನೊಂದಣಿ ಸಂಖ್ಯೆ ನನಗೆ ಹೇಳಿಲ್ಲ ಎಂದರೆ ಸರಿ. ನಾನ ದಿಃ 01-04-2023 ರಂದು ದೂರು ಕೊಟ್ಟ ನಂತರ ನಾನು ಪೋಲಿ ಠಾಣೆಗೆ ಮತ್ತೆ ಹೋಗಿದ್ದೆ. ಒಂದು ತಿಂಗಳ ನಂತರ ಹೋಗಿದ್ದೆ. ನಿ.ಪಿ-11 ರ ಪ್ರಕಾರ ದಿಃ 06-05-2023 ರಂದುಅಂದರೆ ಒಂದು ತಿಂಗಳು 5 ದಿನದ ನಂತರ ನಾನು ಪೋಲಿಸ ಠಾಣೆಗೆ ಹೋಗಿದ್ದೆ ಎಂದರೆ ಸರಿ. ನಾನು ಅಥವಾ

ಶಿವಕುಮಾರ ಮತ್ತು ಸಂಗಮನಾಥರವರು ವಾಹನದ ನೊಂದಣಿ ಸಂಖ್ಯೆ ಹೇಳಿದ್ದು ನಮ್ಮ ಹೇಳಿಕೆಯ ಪ್ರಕಾರ ವಾಹನವನ್ನು ಜಪ್ತಿ ಮಾಡಿರುತ್ತಾರೆ ಎಂದು ನಿ.ಪಿ-11 ರಲ್ಲಿಬರೆದಿಲ್ಲ. ಪೋಲಿಸರು ವಾಹನವನ್ನು ತೋರಿಸಿದ್ದು ಅದನ್ನು ನಾನು ನೋಡಿ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿ. ನಾನು ಪೋಲಿಸ ಠಾಣೆಗೆ ಹೋಗಿ ಹೇಳಿಕೆ ಕೊಡುವಾಗ ನನ್ನ ಜೊತೆ ನನ್ನ ಮಾವ ಅಮೇರ ಅಲಿ, ಶಿವಕುಮಾರ ಮತ್ತು ಸಂಗಮನಾಥರವರು ಇದ್ದೆವು. ನಾನು ಪೋಲಿಸ ಠಾಣೆಗೆ ಹೋಗಿ ಹೇಳಿಕೆ ಕೊಡುವಾಗ ನನ್ನ ಜೊತೆ ನನ್ನ ಮಾವ ಅಮೇರ ಅಲಿ, ಶಿವಕುಮಾರ ಮತ್ತು ಸಂಗಮನಾಥರವರು ಇದ್ದರು ನಾವೆಲ್ಲರೂ ಸೇರಿ ಅಪಘಾತ ಪಡಿಸಿದ ವಾಹನವನ್ನು ಗುರುತಿಸಿರುತ್ತೇವೆ ಎಂದು ನಿ.ಪಿ-11 ರಲ್ಲಿ ಬರೆದಿಲ್ಲ ಎಂದರೆ ಸರಿ. ನನ್ನ ಮಾವ ಅಮೇರ ಅಲಿ, ಶಿವಕುಮಾರ ಮತ್ತು ಸಂಗಮನಾಥರವರು ಹೇಳಿಕೆ ತೆಗೆದುಕೊಂಡಿರುತ್ತಾರೊ ಇಲ್ಲವೊ ಎಂದು ನನಗೆ ನೆನಪಿಲ್ಲ. ಮಾವ ಅಮೇರ ಅಲಿ, ಶಿವಕುಮಾರ ಮತ್ತು ಸಂಗಮನಾಥರವರು ಹೇಳಿಕೆ ಕೊಟ್ಟ ಬಗ್ಗೆ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ಒಂದು ತಿಂಗಳು 5 ದಿನದ ನಂತರ ನಾನು ಪೋಲಿಸ ಠಾಣೆಗೆ ಹೋಗಿದ್ದು ಅದರ ಮದ್ಯದಲ್ಲಿ ನನ್ನ ಮಾವ ಅಮೇರ ಅಲಿ, ಶಿವಕುಮಾರ ಮತ್ತು ಸಂಗಮನಾಥರವರು ಅಥವಾ ನಾನು ಇಂತಹ ವಾಹನದಿಂದ ಅಪಘಾತ ಆಗಿದೆ ಎಂದು ವಾಹನದ ಸಂಖ್ಯೆಯನ್ನು ಪೋಲಿಸರಿಗೆ ಹೇಳಿರುವುದಿಲ್ಲ. ಪೋಲಿಸರು ವಾಹನವನ್ನು ಜಪ್ತು ಮಾಡುವ ಮೊದಲು ನಾನು ನನ್ನ ಮಾವ ಅಮೇರ ಅಲಿ, ಶಿವಕುಮಾರ ಮತ್ತು ಸಂಗಮನಾಥರವರು ಗಾಡಿಯನ್ನು ನಾವು ಗುರುತಿಸುತ್ತೇವೆ ಮತ್ತು ವಾಹನದ ಸಂಖ್ಯೆಯನ್ನು ಪೋಲಿಸರಿಗೆ ಹೇಳಿರುವುದಿಲ್ಲ ಎಂದರೆ ಸರಿ. ನಾನು ಅಪಘಾತವಾದಾಗ ವಾಹನವನ್ನು ನೋಡಿಲ್ಲ ಎಂದರೆ ಸರಿ.

2. ಅಪಘಾತ ಆದ ನಂತರ ನಾನು ನನ್ನ ತಂದೆಯನ್ನು ಸರಕಾರಿ ಆಸ್ಪತ್ರೆ ಚಿಂಚೋಳಿಗೆ

ಕರೆದುಕೊಂಡು ಹೋದೆವು. ಆಸ್ಪತ್ರೆಗೆ ನನ್ನ ತಂದೆಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋದ ನಂತರ ನಾನು ಆಸ್ಪತ್ರೆಗೆ ಹೋಗಿದ್ದೆ. ಅಪಘಾತ ಹೇಗೆ ಆಯಿತು ಎಂದು ಆಸ್ಪತ್ರೆಯಲ್ಲಿ ಬರೆದಿರುತ್ತಾರೊ ಇಲ್ಲವೊ ಎಂದು ನನಗೆ ನೆನಪಿಲ್ಲ. ನನ್ನ ತಂದೆಗೆ ಗಾಯಗಳು ಹೇಗೆ ಆಯಿತು ಎಂದು ಬರೆದಿರುತ್ತಾರೊ ಇಲ್ಲವೊ ಎಂದು ನನಗೆ ನನಪಿಲ್ಲ.  ಸಾಕ್ಷಿ ಮುಂದುವರೆದು ಯ್ಯಾಂಬ್ಯುಲೆನ್ಸನಲ್ಲಿ ಬೀದರ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಹೇಳಿರುತ್ತಾರೆ. ಅಪಘಾತ ಆದ ನಂತರ ನಾನು ನನ್ನ ತಂದೆಯನ್ನು ಸರಕಾರಿ ಆಸ್ಪತ್ರೆ ಚಿಂಚೋಳಿಗೆ ಕರೆದುಕೊಂಡು ಹೋಗಿದ್ದರು ಎಂದು ತೋರಿಸಲು ಸರಕಾರಿ ಆಸ್ಪತ್ರೆ ಚಿಂಚೋಳಿ ನೀಡಿದ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ನಿ.ಪಿ-11ನ್ನು ಹೊರತುಪಡಿಸಿ ನನ್ನ ತಂದೆಗೆ ಇದೆ ವಾಹನದಿಂದ ಅಪಘಾತ ಆಗಿದೆ ಎಂದು ತೋರಿಸಲು ನಾನು ನ್ಯಾಯಾಲಯದಲ್ಲಿ ಯಾವುದೇ ದಾಖಲೆ ಸಲ್ಲಿಸಿಲ್ಲ ಎಂದರೆ ಸರಿ. ಯಾವುದೊ ಒಂದು ವಾಹನದಿಂದ ನನನ ತಂದೆಯ ಅಪಘಾತ ಆಗಿದ್ದು ನಾನು ದ್ವಿಚಕ್ರ ವಾಹನ ಎಂದು ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿ.  ಅಪಘಾತ ಆದ ಸ್ಥಳ ಹತ್ತಿರ ಟೋಲ ಇದೆ ಎಂದರೆ ಸರಿ.  ಅಪಘಾತದ ಸಮಯದಲ್ಲಿ ಎಷ್ಟುವಾಹನಗಳು ಓಡಾಡಿದ್ದವು ಎಂದು ಟೋಲನಲ್ಲಿ ನಮೂದು ಇರುತದೆ ಎಂದರೆ ನನಗೆ ಗೊತ್ತಿಲ್ಲ. ನಾವು ಟೋಲಗೆ ಹೋಗಿ ಯಾವ ವಾಹನದಿಂದ ಅಪಘಾತ ಆಗಿದೆ ಎಂದು ವಿಚಾರಿಸಿರುವುದಿಲ್ಲ. ನನ್ನ ತಂದೆಗೆ ಕೆ ಎ 32 ಎಚ ಡಿ 2188 ವಾಹನದಿಂದ ಅಪಘಾತ ಆಗದೆ ಇದ್ದರು ಸಹ ಪೋಲಿಸರ ಜೊತೆ ಹೋಗಿ ವಾಹನದ ಮಾಲಿಕರ ಜೊತೆ ಸೇರಿಕೊಂಡು ನಾನು ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

3. ನನ್ನ ತಂದೆಗೆ ನಾವು ಒಟ್ಟು 5 ಜನ ಮಕ್ಕಳು. ನನ್ನ ತಮ್ಮ ಮತ್ತು ತಂಗಿಯರು

ಶಾಲೆ ಕಲಿಯುತ್ತಿದ್ದರೆ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೆ ದಾಖಲೆ ಸಲ್ಲಿಸಿಲ್ಲ, ನಾನು ಯಾವುದೇ ಕೆಲಸ ಮಾಡುತ್ತಿಲ್ಲ. ಸಾಕ್ಷಿ ಮುಂದುವರೆದು ನಾನು ಯಾವಾಗದು ಕೂಲಿ ಕೆಲಸ ಮಾಡುತ್ತೇನೆ ಇಲ್ಲದಿದ್ದರೆ ಮಾಡುವುದಿಲ್ಲ ಎಂದು ಹೇಳುತ್ತಾರೆ. ಅರ್ಜಿದಾರ 2 ರಿಂದ 4 ರವರು ವಯಸ್ಕರಾಗಿದ್ದು ಅವರು ನನ್ನ ತಂದೆಯ ಆದಾಯದ ಮೇಲೆ ಅವಲಂಬಿತರಾಗಿದ್ದರು ಎಂದರೆ ಸರಿಯಲ್ಲ. ಅಪಘಾತವಾದಾಗ ನನ್ನ ತಂದೆಗೆ 45 ವರ್ಷ ವಯಸ್ಸು ಆಗಿತ್ತು. ಆದಾರ ಕಾರ್ಡ ಸಲ್ಲಿಸಿಲ್ಲ. ಅರ್ಜಿದಾರರ ಆಧಾರ ಕಾರ್ಡಗಳನ್ನು ನ್ಯಾಯಾಲಯಕ್ಕೆ ಸಲ್ಲಿರುತ್ತೇನೆ. ನನ್ನ ತಂದೆಯ ಆಧಾರ ಕಾರ್ಡ ಇರುವುದಿಲ್ಲ. ನನ್ನ ತಂದೆಗೆ 50 ವರ್ಷಕ್ಕಿಂತ ಹೆಚ್ಚಿನ ವಯಸ್ಸಾಗಿದ್ದುಯ, ಪರಿಹಾರ ಪಡೆಯುವ ಉದ್ದೇಶದಿಂದ ಅವರಿಗೆ 45 ವರ್ಷ ವಯಸ್ಸಾಗಿದೆ ಎಂದು ಸುಳ್ಳು ಹೇಳುತ್ತಿದ್ದು ಅದನ್ನು ಮುಚ್ಚಿಡಲು ಅವರ ಆಧಾರ ಕಾರ್ಡ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಗೌಂಡಿ ಕೆಲಸ ಮಾಡುತ್ತಿದ್ದರು ಅವರಿಗೆ ತಿಂಗಳಿಗೆ ರೂ.25,000/- ಪಗಾರ ಬರುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಸಾಕ್ಷಿಗೆ ವಾಹನ ಜಪ್ತಿ ಪಂಚನಾಮೆಯನ್ನು ತೋರಿಸಿದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಆರ -1 ಎಂದು ಗುರುತಿಸಲಾಯಿತು. ಅದರಲ್ಲಿ ಈಶ್ವರ, ಚಂದ್ರಪ್ಪ ತಂದೆ ಅಂಜಪ್ಪ, ಚಂದ್ರಕಾಂತ ತಂದೆ ಲಕ್ಷ್ಮಣರಾವ, ಅಲ್ಲಾ ಬಕ್ಷ ಮತ್ತು ಅಮರಪ್ಪ ಎಂಬ ಹೆಸರಿರುವ ವ್ಯಕ್ತಿ ಯಾರು ಎಂದು ನನಗೆ ಗೊತ್ತಿಲ್ಲ. ನಿ.ಆರ -1 ರಲ್ಲಿ ಶಿವಕುಮಾರ ಮತ್ತು ಸಂಗಮನಾಥರವರ ಹೆಸರು ಇಲ್ಲ ಎಂದರೆ ಸರಿ. ನಾನು ಸಲ್ಲಿಸಿದ ಎಲ್ಲಾ ದಾಖಲೆಗಳನ್ನು ನೋಡಿದರೆ ನಾನು ಮೋಟರ ಸೈಕಲ ವಿರುದ್ಧ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ವಾಹನಗಳನ್ನು ನಾನು ಹೇಳಿಕೆ ಕೊಡುವ ಮೊದಲೆ ಜಪ್ತು ಮಾಡಲಾಗಿತ್ತು ಎಂದರೆ ಸಾಕ್ಷಿ ಪೋಲಿಸ ಠಾಣೆಯಲ್ಲಿ ನನಗೆ ಗಾಡಿ ತೋರಿಸಿಲ್ಲ

ಎಂದು ಹೇಳುತ್ತಾರೆ. ನಾನು ಕೇಳಿರುವ ಪರಿಹಾರ ಹಣಕ್ಕೆ ಯಾವುದೆ ಆಧಾರ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ,
ಚಿಂಚೋಳಿ.